SRI N. HUTCHAMASTHY GOWDA : In some places it is necessary. Wherever the work cannot be discharged by the officers-whether it is Tahsildar or the Sub-Division Officer, additional posts are created and they are posted for special work.

LOOTING OF GODOWNS AND SHOPS IN THE STATE

94. SRI KARIAPPA (Kanakapura) :— Will the Chief Minister be pleased to state :-

(*a*) the names of places where looting of godowns and shops took place during the recent months ;

(*b*) the loss sustained in each case ;

(*c*) the quarters from which the looters and the hooligans received encouragement ;

(*d*) the concealed objects with which these happenings took place ?

SRI D. DEVARAJ URS (Chief Minister):—

(*a*) and (*b*) *Vide* Statement placed on the Table of the House*.

(*c* and (*d*) These acts are attributable to the anti-social elements who took advantage of the situation.

ಶ್ರೀ ಎಸ್. ಕರಿಯಪ್ಪ. ಸಮಾಜ ಘಾತಕ ವ್ಯಕ್ತಿಗಳು ದುರ್ಲಾಭವನ್ನು ಪಡೆದುಕೊಂಡಿದ್ದೇ ಈ ಘಟನೆಗೆ ಕಾರಣ ಎಂದು ಉತ್ತರವಿದೆ. ಅವರ ಹಿಂದು ಗಡೆ ಯಾರಾದರೂ ನಿಂತು ಪ್ರೋತ್ಸಾಹ ಕೊಟ್ಟರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

---

* Copy placed in the Karnataka Legislative Library No. 6 dated 5-3-74.

† ಶ್ರೀ ಎಚ್. ಎಂ. ಚನ್ನಬಸಪ್ಪ —ಅಂಥಾದ್ಯಾವುದೂ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ಕರಿಯಪ್ಪ.—ತಃಖ್ತೆಯಲ್ಲಿ ಕೊಟ್ಟಿರುವಂತೆ ಮಂಡ್ಯ ಜಿಲ್ಲೆಯಲ್ಲಿ ಅಧಿಕವಾಗಿ ಲೂಟಿ ನಡೆದಿರುವುದಕ್ಕೆ ಕಾರಣ ಗೊತ್ತೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಮಯ ಸನ್ನಿವೇಶಗಳಿಂದ ಆ ರೀತಿ ಯಾಗಿರಬಹುದು. ಇದಕ್ಕೆ ಹಿನ್ನೆಲೆಯಲ್ಲಿ ಪ್ರಬಲವಾದ ವ್ಯಕ್ತಿಗಳಿರುವುದು ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ಕರಿಯಪ್ಪ.— ಈಗ ಯಾರು ನಷ್ಟವನ್ನುಂಟುಮಾಡಿದರೋ ಅವರಿಂದ ಅದನ್ನು ವಸೂಲು ಮಾಡುವಿರೋ ಅಥವಾ ಸರಕಾರದವರೇ ನಷ್ಟ ಕಟ್ಟಿಕೊಡುವಿರೋ ?

ಶ್ರೀ ಎಚ್ ಎಂ. ಚನ್ನಬಸಪ್ಪ.—ದೊಂಬಿ, ಲೂಟಿ, ವಗ್ಗೈರೆ ನಡೆದ ಕಾಲಕ್ಕೆ ಯಾರೋ ಒಬ್ಬರು ಕಾರಣರು ಇಬ್ಬರು ಕಾರಣರು ಎಂದು ವಿಧಾಯಕ ಮಾಡುವುದು ಕಷ್ಟ ಮತ್ತು ಇದನ್ನು ಸರಿದೂಗುವುದೂ ಕಷ್ಟ.

ಶ್ರೀ ಡಿ. ಹಲಗೇಗೌಡ.— ಮಂಡ್ಯದಲ್ಲಿ ಕೆಲವು ಕಡೆ ನಡೆದ ಗಲಭೆಯ ಬಗ್ಗೆ ಕೆಲವು ಹಸ್ತಪತ್ರಿಕೆಗಳನ್ನು ಹಂಚಿದ್ದಾರೆ ಇದರ ಮೂಲವನ್ನು ತಿಳಿದು ಕೊಳ್ಳಬೇಕು ಎಂದು ಆದೇಶ ಕೊಡಲಾಗಿತ್ತು. ಅದು ಕೆಲವು ಸಂಘ ಸಂಸ್ಥೆಗಳ ಪತ್ರಿಕೆಯಾಗಿತ್ತು. ಸಂಘಕ್ಕೆ ಸೇರಿದ ವಾಲೆಂಟಿಯರ್ಸ್ ಮೇಲೆ ಅನುಮಾನ ಬಂದಿದೆ. ಈ ವಿಚಾರವಾಗಿ ತಾವು ಏನಾದರೂ ಎನ್‌ಕ್ವೈರಿ ಮಾಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವುಗಳನ್ನು ಪರಿಶೀಲನೆ ಮಾಡಿದ ಮೇಲೆ, ಯಾವ ಪ್ರಭಾವಯುತ ಶಕ್ತಿಗಳೂ ಇದರ ಹಿಂದೆ ಇಲ್ಲ ಎನ್ನುವುದು ಗೊತ್ತಾಗಿದೆ.

ಶ್ರೀ ಕೆ. ಎಂ. ನಾಗಣ್ಣ.—ಪ್ರಬಲವಾದ ಶಕ್ತಿಗಳು ಯಾರೂ ಇದರಲ್ಲಿ ಇಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದಿರಿ, ಪ್ರಬಲ ಅಲ್ಲದೆ ಇರುವವರು ಇದ್ದಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಸಮಯ, ಸಂದರ್ಭ, ಸನ್ನಿವೇಶಗಳನ್ನು ಈ ಅಂಟಿಸೋಷಿಯಲ್ ಎಲಿಮೆಂಟ್ಸ್ ಉಪಯೋಗಿಸಿಕೊಂಡು ಈ ರೀತಿಯ ದುರ್ನಡತೆಯಲ್ಲಿ ತೊಡಗಿದ್ದಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಗಲಭೆಯಲ್ಲಿ ನೊಂದ ಜನಕ್ಕೆ ಪರಿಹಾರ ಕೊಟ್ಟಿದ್ದೀರಿ ಎನ್ನುವುದು ತಿಳಿದುಬಂದಿದೆ, ಎಷ್ಟು ಜನಕ್ಕೆ ಕೊಟ್ಟಿದ್ದೀರಿ ? ಸತ್ತವರಿಗೆ ಎಷ್ಟು ಜನಕ್ಕೆ ಕೊಟ್ಟಿದ್ದೀರಿ ? ಯಾವ ವರ್ಗದ ಜನಗಳಿಗೆ ಕೊಟ್ಟಿದ್ದೀರಿ, ಎನ್ನುವ ವಿವರವನ್ನು ತಿಳಿಸಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮಗೆ ತಿಳಿದ ಪ್ರಕಾರ ಪೋಲೀಸ್ ಫೈರಿಂಗ್‌ನಲ್ಲಿ ನಿರಪರಾಧಿಗಳು ಇದಕ್ಕೆ ಒಳಗಾಗಿದ್ದಾರೆ, ಇದನ್ನು ಪರಿಶೀಲನೆ ಮಾಡಿ, ಒಂದು ಸಾವಿರ ರೂಪಾಯಿಂದ ಹಿಡಿದು ಎರಡೂವರೆ ಸಾವಿರ ರೂಪಾಯಿಗಳ ವರೆಗೆ ಎಕ್ಸ್‌ಗ್ರೇಷಿಯ ಸಹಾಯ ಮಾಡಬೇಕು ಎಂದು ಆಜ್ಞೆ ಮಾಡಿದೆ. ಇನ್ಸ್‌ಪೆಕ್ಟರ್ ಜನರಲ್ ಈ ಕೇಸುಗಳನ್ನು ಪರಿಶೀಲನೆ ಮಾಡಿ ಹಣವನ್ನು ಕೊಡುತ್ತಾರೆ. ಎಷ್ಟು ಕೊಟ್ಟಿದ್ದಾರೆ ಎನ್ನುವ ವಿವರ ನನ್ನ ಮುಂದೆ ಇಲ್ಲ.

ಶ್ರೀ ಎಚ್. ಜಿ. ಚನ್ನಪ್ಪ.—ಈ ಸಂದರ್ಭದಲ್ಲಿ ಕೆಲವರ ಅಂಗಡಿಗಳನ್ನು ಲೂಟಿ ಮಾಡಲಾಗಿದೆ. ಕೆಲವು ಕಡೆ ಮಾತ್ರ ಪರಿಹಾರವನ್ನು ಕೊಡಲಾಗಿದೆ, ಎಲ್ಲರಿಗೂ ಪರಿಹಾರ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಸಮಾಚಾರ ನನ್ನ ಮುಂದೆ ಇಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.....ಗಲಭೆಯಲ್ಲಿ ನೊಂದವರಿಗೆ ಮತ್ತು ಸತ್ತವರಿಗೆ ಪರಿಹಾರವನ್ನು ಕೊಡತಕ್ಕದ್ದು ಸರ್ಕಾರದ ಮುಂದೆ ಇದೆ. ನೊಂದವರಿಗೆ ಮತ್ತು ಆಸ್ತಿಪಾಸ್ತಿಗಳನ್ನು ನಷ್ಟಮಾಡಿಕೊಂಡಂಥವರಿಗೆ ಸ್ವಲ್ಪ ಭಾಗ ಪರಿಹಾರವನ್ನು ಕೊಟ್ಟಿದ್ದಾರೆ. ಆದರೆ ಸತ್ತವರಿಗೆ ಯಾವ ವಿಧವಾದ ಪರಿಹಾರವನ್ನು ಕೊಟ್ಟಿಲ್ಲ, ಕೊಡುವುದಿಲ್ಲ ಎನ್ನತಕ್ಕದ್ದು ಸರ್ಕಾರದ ಮುಂದೆ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ, ಇದರ ಬಗ್ಗೆ ಸ್ಪಷ್ಟವಾದ ಉತ್ತರ ಕೊಡಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ತಿಳಿದುಕೊಂಡರೆ ಅದಕ್ಕೆ ನಾನು ಭಾಗಿಯಲ್ಲ.

ಶ್ರೀ ಎಸ್. ಕರಿಯಪ್ಪ.—ಸುಮಾರು 56 ಪ್ರದೇಶಗಳಲ್ಲಿ ಈ ರೀತಿಯ ಗಲಭೆಗಳು ನಡೆದಿವೆ. ಲೂಟಿಯಾಗಿದೆ, ಆಸ್ತಿಪಾಸ್ತಿಗಳು ನಷ್ಟವಾಗಿದೆ, ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಇಂಥ ಪರಿಸ್ಥಿತಿ ಮುಂದೆ ಉಂಟಾಗದಂತೆ ನೋಡಿ ಕೊಳ್ಳುವುದಕ್ಕೋಸ್ಕರ ಏನಾದರೂ ವ್ಯವಸ್ಥೆ ಮಾಡಬೇಕೆಂದು ಸರ್ಕಾರದವರು ಆಲೋಚನೆ ಮಾಡಿದ್ದಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಇಂಥ ಪ್ರಸಂಗಗಳು ನಡೆಯಬಾರದು, ಅದಕ್ಕೆ ಶಾಸನ ವಿಧಾಯಕ ನಿಯಮಗಳು ಇವೆ. ಇವುಗಳನ್ನು ಪರಿಪಾಲನೆ ಮಾಡುವುದಕ್ಕೆ ಶಿಬ್ಬಂದಿ ಇದೆ, ಆ ಸಿಬ್ಬಂದಿ ವಿಧ ನಿಯಮಗಳಿಗನುಗುಣವಾಗಿ ಕೆಲಸಮಾಡುತ್ತಿದೆ.

LAND GRANTED FOR CASHEW CULTIVATION IN SAGAR TALUK

166. *Sri* Kagodu Thimmappa (Sagar) :—Will the Minister for Revenue be pleased to state :—

(*a*) the extent of land granted for cashew cultivation from 1970 to end of 1973 in Sagar Taluk and the names of the villages and the names of the grantees ;

(*b*) whether it has come to the notice of the Government that cashew is not cultivated in the land granted for cashew cultivation ;

(*c*) if so, whether government intends to resume the land since no cashew is cultivated so for?

Sri *N.* Hutchamasthy Gowda (Minister for Revenue) :—

(*a*) *Village*	*Extent* A-G	*Name of Grantees*
Udri	4-00	Vasudev Shetty Bin Lingashetty
Udri	4-00	Manja Shetty Bin Linga Shetty
Mathikoppa	5-00	Govinda Rao Bin Venkataramanaiah
Malpe	8-00	Ramakrishnappa Bin Venkatagiriyappa